# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಬಾಗಲಕೋಟೆಯ ಶ್ರೀಮತಿ ಕಮಲಾತಾಯಿ ಹೆರಂಜಾಲ್ಸ್ ಪ್ಯಾರಾಮೆಡಿಕಲ್ ಕಾಲೇಜು ಮಂಜೂರಾತಿ.

**

ಓದಲಾಗಿದೆ.

ದಿನಾಂಕ 29.10.2004 ಸಂಖ್ಯೆ: PMB/15/2004-05ರ ಪ್ಯಾರಾ ಮೆಡಿಕಲ್ ಬೋರ್ಡ್ ಸದಸ್ಯ ಕಾರ್ಯದರ್ಶಿಯವರ ಪತ್ರ.

ಪೀಠಿಕೆ:

೧) ಬಾಗಲಕೋಟೆಯ ಶ್ರೀಮತಿ ಕಮಲಾತಾಯಿ ಹೆರಂಜಾಲ್ಸ್ ಪ್ಯಾರಾ ಮೆಡಿಕಲ್ ಕಾಲೇಜಿಗೆ ಡಿಪ್ಲೊಮೋ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ ಮತ್ತು ಡಿಪ್ಲೊಮೋ ಇನ್ ಹೆಲ್ತ್ ಇನ್ಸ್‌ಪೆಕ್ಟರ್ ಕೋರ್ಸ್‌ಗಳೊಂದಿಗೆ ಮಂಜೂರಾತಿಗಾಗಿ ವಿದ್ಯುಕ್ತವಾದ ಅರ್ಜಿಯನ್ನು ಪ್ಯಾರಾ ಮೆಡಿಕಲ್ ಬೋರ್ಡ್‌ಗೆ ಸಲ್ಲಿಸಲಾಗಿತ್ತು. ಮಂಡಳಿಯು ವಿಷಯ ತಜ್ಞರ ತಂಡವನ್ನು ರಚಿಸಿ ಮೇಲ್ಕಂಡ ಕೋರ್ಸ್‌ನ್ನು ಸಂಸ್ಥೆಯು ನಡೆಸಲು ಹೊಂದಿರುವ ಮೂಲಭೂತ ಸೌಕರ್ಯಗಳನ್ನು ಪರಿವೀಕ್ಷಿಸಿ ಅದರ ವರದಿಯನ್ನು ಸಲ್ಲಿಸಲು ಸೂಚಿಸಿತ್ತು. ತಜ್ಞರ ತಂಡವು ಸಂಸ್ಥೆಯನ್ನು ತಾ: 21.08.2004 ಮತ್ತು 23.08.2004 ರಂದು ಭೇಟಿ ನೀಡಿ ಪರಿವೀಕ್ಷಿಸಿ ಅದರ ವರದಿಯನ್ನು ಸೂಕ್ತ ಶಿಫಾರಸ್ಸಿನೊಂದಿಗೆ ಮಂಡಳಿಗೆ ಸಲ್ಲಿಸಿತ್ತು. ತಜ್ಞರ ತಂಡದ ಪರಿವೀಕ್ಷಣಾ ವರದಿಯನ್ನು ತಾರೀಖು: 15.10.2004 ರಂದು ನಡೆದ ಆರ ವೈದ್ಯಕೀಯ ಮಂಡಳಿಯ ಸಭೆಯಲ್ಲಿ ವಿಶ್ಲೇಷಿಸಿ ಮೇಲ್ಕಂಡ ಕಾಲೇಜನ್ನು ಮಂಜೂರು ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಈ ಪ್ರಕರಣವನ್ನು ಸಕಲವಲಯಗಳಿಂದ ಲಭ್ಯವಿರುವ ವಸ್ತುಸ್ಥಿತಿ ಆಧಾರದ ಮೇಲೆ ಪರಿಶೀಲಿಸಲಾಗಿದೆ.

## ಸರ್ಕಾರಿ ಆದೇಶ ಸಂಖ್ಯೆ: ಆಕುಕ 574 ಎಂಎಂಇ 2004

## ಬೆಂಗಳೂರು ದಿನಾಂಕ 18.08.2005

೨) ಬಾಗಲಕೋಟೆಯ ಶ್ರೀಮತಿ ಕಮಲಾತಾಯಿ ಹೆರಂಜಾಲ್ಸ್ ಪ್ಯಾರಾ ಮೆಡಿಕಲ್ ಕಾಲೇಜಿಗೆ ತಲಾ 20(ಇಪ್ಪತ್ತು) ವಿದ್ಯಾರ್ಥಿಗಳ ಪ್ರವೇಶ ಮಿತಿಯ (೧) ಡಿಪ್ಲೋಮಾ ಇನ್ ಮೆಡಿಕಲ್ ಲ್ಯಾಬ್ ಟೆಕ್ನಾಲಜಿ (೨) ಡಿಪ್ಲೊಮೋ ಇನ್ ಹೆಲ್ತ್ ಇನ್ಸ್‌ಪೆಕ್ಟರ್ ಕೋರ್ಸ್‌ಗಳೊಂದಿಗೆ 2005-2006ನೇ ಶೈಕ್ಷಣಿಕ ವರ್ಷದಿಂದ ಜಾರಿಗೆ ಬರುವಂತೆ ಸಂಯೋಜನೆ ನೀಡಲು ಶಿಫಾರಸ್ಸು ಮಾಡಲಾಗಿದೆ.

### ಷರತ್ತುಗಳು:

(೧) ಸಂಸ್ಥೆಯು ಈ ಕೋರ್ಸುಗಳನ್ನು ಪ್ರಾರಂಭಿಸುವ ಮೊದಲು ಪೂರ್ಣ ಪ್ರಮಾಣದಲ್ಲಿ ಬೋಧಕ ಸಿಬ್ಬಂದಿಯನ್ನು ನೇಮಕ ಮಾಡಿಕೊಳ್ಳತಕ್ಕದ್ದು.

(೨) ಪ್ಯಾರಾ ಮೆಡಿಕಲ್ ಕೋರ್ಸುಗಳನ್ನು ಪ್ರಾರಂಭ ಮಾಡುವ ಮೊದಲು ಸಂಸ್ಥೆಯು ಸಂಯೋಜನಾ ಶುಲ್ಕದ ರೂಪದಲ್ಲಿ ಪ್ರತಿ ಕೋರ್ಸ್‌ಗೆ ಮೂವತ್ತು ಸಾವಿರ ರೂಪಾಯಿಗಳನ್ನು ಪ್ಯಾರಾ ಮೆಡಿಕಲ್ ಬೋರ್ಡಿಗೆ ಸಂದಾಯ ಮಾಡತಕ್ಕದ್ದು.

(೩) ಕಾಲೇಜನ್ನು ಪ್ರಾರಂಭ ಮಾಡುವ ಮೊದಲು ಬೋರ್ಡು ನಿಗದಿಪಡಿಸಿದ ಬ್ಯಾಂಕ್ ಗ್ಯಾರಂಟಿಯನ್ನು ಒದಗಿಸತಕ್ಕದ್ದು. ಸದರಿ ಕೋರ್ಸ್‌ಗಳಿಗೆ ವಿದ್ಯಾರ್ಥಿ ಪ್ರವೇಶವನ್ನು ವರ್ಷಕ್ಕೆ ಒಂದು ಬಾರಿ ಪ್ಯಾರಾ ಮೆಡಿಕಲ್ ಬೋರ್ಡ್ ನಿಗದಿಪಡಿಸಿದ ಘಟನಾವಳಿ ಪ್ರಕಾರ ಮಾಡಿಕೊಳ್ಳಬೇಕು.

(೪) ಸದರಿ ಕೋರ್ಸುಗಳಿಗೆ ಪ್ರವೇಶವನ್ನು ಆಯ್ಕೆಗೊಂಡ ವಿದ್ಯಾರ್ಥಿಗಳ ಪಟ್ಟಿಯನ್ನು ಪ್ಯಾರಾ ಮೆಡಿಕಲ್ ಬೋರ್ಡ್‌ಗೆ ಅನುಮೋದನೆಗೆ ಸಲ್ಲಿಸತಕ್ಕದ್ದು.

(೫) ಪ್ಯಾರಾ ಮೆಡಿಕಲ್ ಕೋರ್ಸ್‌ಗೆ ಪ್ರವೇಶ ಪಡೆದ ಪ್ರತಿ ವಿದ್ಯಾರ್ಥಿಗೆ ನಿಗದಿತ ನೋಂದಣಿ ಶುಲ್ಕದೊಂದಿಗೆ ವಿದ್ಯಾರ್ಥಿಗಳ ಆಯ್ಕೆ ಪಟ್ಟಿಯನ್ನು ಅವರ ವಿದ್ಯಾರ್ಹತೆಯ ಪ್ರಮಾಣ ಪತ್ರದೊಂದಿಗೆ ಪ್ಯಾರಾ ಮೆಡಿಕಲ್ ಬೋರ್ಡ್‌ಗೆ ಸಲ್ಲಿಸತಕ್ಕದ್ದು.

(೬) ಪ್ಯಾರಾ ಮೆಡಿಕಲ್ ಕೋರ್ಸ್‌ಗೆ ಪ್ರವೇಶ ಪಡೆಯಲು ಕನಿಷ್ಠ ಪಿಯುಸಿ ಅಥವಾ ತತ್ಸಮಾನ ವಿದ್ಯಾರ್ಹತೆಯನ್ನು ಹೊಂದಿರಬೇಕು.

(೭) ಪ್ಯಾರಾ ಮೆಡಿಕಲ್ ಕೋರ್ಸ್‌ಗೆ ಪ್ರವೇಶ ಪಡೆದ ಪ್ರತಿ ವಿದ್ಯಾರ್ಥಿಯಿಂದ ಸರ್ಕಾರ ಅಥವಾ ಪ್ಯಾರಾ ಮೆಡಿಕಲ್ ಬೋರ್ಡ್ ನಿಗದಿಪಡಿಸಿದ ಶುಲ್ಕವನ್ನು ಮಾತ್ರ ಪಡೆಯತಕ್ಕದ್ದು.

(೮) ಯಾವುದೇ ಸಂದರ್ಭದಲ್ಲಿ ಸರ್ಕಾರ ಮಂಜೂರಾತಿ ನೀಡಿದ ಪ್ರವೇಶಮಿತಿಗಿಂತ ಹೆಚ್ಚಿನ ವಿದ್ಯಾರ್ಥಿಗಳಿಗೆ ಪ್ರವೇಶ ನೀಡತಕ್ಕದ್ದಲ್ಲ.

(೯) ನಿಗದಿಪಡಿಸಿದ ಸೀಟುಗಳಲ್ಲಿ ಶೇ. 20 ರಷ್ಟನ್ನು ಅಥವಾ ಸರ್ಕಾರ ಕಾಲಕಾಲಕ್ಕೆ ನಿಗದಿಪಡಿಸುವಂತೆ ಸರ್ಕಾರದಿಂದ ಆಯ್ಕೆ ಮಾಡಿದ ಅಭ್ಯರ್ಥಿಗಳಿಗೆ ಪ್ರವೇಶ ನೀಡಲು ಸಂಸ್ಥೆಯು ಬದ್ಧವಾಗಿರತಕ್ಕದ್ದು.

(೧೦) ಪ್ಯಾರಾ ಮೆಡಿಕಲ್ ಬೋರ್ಡ್ ನಿಗದಿಪಡಿಸಿದ ನಿಯಮಾವಳಿಯಂತೆ, ಪ್ಯಾರಾ ಮೆಡಿಕಲ್ ಕೋರ್ಸಿಗೆ ಪ್ರವೇಶ ಪಡೆಯುವ ಪ್ರತಿ ವಿದ್ಯಾರ್ಥಿಯ ವಯೋಮಿತಿ ಪಠ್ಯಕ್ರಮ, ಕೋರ್ಸಿನ ಅವಧಿ ಅಥವಾ ಪರೀಕ್ಷಾ ಕ್ರಮ ಮತ್ತು ಪ್ಯಾರಾ ಮೆಡಿಕಲ್ ಬೋರ್ಡ್ ನಿಗದಿಪಡಿಸಿದ ಇತರೆ ನಿಯಮಗಳನ್ನು ಸಂಸ್ಥೆಯು ಚಾಚೂ ತಪ್ಪದೇ ಕಡ್ಡಾಯವಾಗಿ ಪಾಲಿಸತಕ್ಕದ್ದು.

(೧೧) ಕೋರ್ಸನ್ನು ಪ್ರಾರಂಭಿಸುವ ಮುನ್ನ ಸುಸಜ್ಜಿತ ತರಗತಿ ಕೊಠಡಿ ಪ್ರಯೋಗಶಾಲೆ, ವಾಚನಾಲಯ, ವಿದ್ಯಾರ್ಥಿನಿಲಯ ಹಾಗೂ ಇತರೆ ಸೌಲಭ್ಯವನ್ನು ವಿದ್ಯಾರ್ಥಿಗಳಿಗೆ ಒದಗಿಸತಕ್ಕದ್ದು.

(೧೨) ಮೂಲಭೂತ ಸೌಕರ್ಯಗಳ ಲಭ್ಯತೆಗೆ ಸಂಬಂಧಿಸಿದಂತೆ ವಿದ್ಯಾರ್ಥಿಗಳು ಮೊದಲ ವರ್ಷದ ಪರೀಕ್ಷೆಯನ್ನು ತೆಗೆದುಕೊಳ್ಳುವ ಪೂರ್ವದಲ್ಲಿ ಪ್ಯಾರಾ ಮೆಡಿಕಲ್ ಬೋರ್ಡ್ ವಿವೇಚನಾನುಸಾರ ಎರಡನೇ ಬಾರಿಗೆ ಸಂಸ್ಥೆಯನ್ನು ತಪಾಸಣೆಗೆ ಒಳಪಡಿಸಬಹುದು.

(೧೩) ಮೇಲ್ಕಂಡ ಪ್ಯಾರಾ ಮೆಡಿಕಲ್ ಕಾಲೇಜಿಗೆ ಸರ್ಕಾರದಿಂದ ಯಾವುದೇ ಆರ್ಥಿಕ ನೆರವು ಅಥವಾ ಅನುದಾನವನ್ನು ನೀಡಲಾಗುವುದಿಲ್ಲ ಅದು ಶಾಶ್ವತ ಅನುದಾನ ರಚಿತ ಕಾಲೇಜಾಗಿರುತ್ತದೆ.

(೧೪) ಪ್ಯಾರಾ ಮೆಡಿಕಲ್ ಬೋರ್ಡ್‌ನಲ್ಲಿ ನೋಂದಣಿ ಮಾಡಿಸತಕ್ಕದ್ದು ಹಾಗೂ ಪ್ಯಾರಾ ಮೆಡಿಕಲ್ ಬೋರ್ಡ್ ನಿಗದಿಪಡಿಸಿದ ಮಾದರಿಯನ್ನು ಅನುಸರಿಸತಕ್ಕದ್ದು.

(೧೫) ಪ್ಯಾರಾ ಮೆಡಿಕಲ್ ಕೋರ್ಸ್‌ನ ಅಂತ್ಯದಲ್ಲಿ ಪ್ಯಾರಾ ಮೆಡಿಕಲ್ ಬೋರ್ಡ್ ನಡೆಸುವ ಪರೀಕ್ಷೆಯನ್ನು ವಿದ್ಯಾರ್ಥಿಗಳು ತೆಗೆದುಕೊಂಡು ಉತ್ತೀರ್ಣರಾಗುವ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವನ್ನು ಪ್ಯಾರಾ ಮೆಡಿಕಲ್ ಬೋರ್ಡ್‌ನಿಂದ ಪಡೆಯತಕ್ಕದ್ದು.

(೧೬) ಪ್ರತಿ ತಪಾಸಣೆಗೆ ನಿಗದಿಪಡಿಸಿದ ಶುಲ್ಕವನ್ನು ಕಾಲೇಜು ಪ್ಯಾರಾ ಮೆಡಿಕಲ್ ಬೋರ್ಡ್‌ಗೆ ಸಂದಾಯ ಮಾಡತಕ್ಕದ್ದು.

(೧೭) ತಾರೀಖು: 30.3.1999 ಸಂ: ಆಕುಕ 144 ಎಂಎಂಇ 98ರ ಸರ್ಕಾರಿ ಆದೇಶದಲ್ಲಿ ನಿರ್ದಿಷ್ಟಪಡಿಸಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

(೧೮) ಕಾಲಕಾಲಕ್ಕೆ ಸರ್ಕಾರ ಮತ್ತು ವೈದ್ಯಕೀಯ ಶಿಕ್ಷಣ ನಿರ್ದೇಶಕರು ಹಾಗೂ ಪ್ಯಾರಾ ಮೆಡಿಕಲ್ ಬೋರ್ಡ್ ಹೊರಡಿಸುವ ಆದೇಶಗಳಿಗೆ ಸಂಸ್ಥೆಯು ಬದ್ಧವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಎಸ್.ನಾಗರಾಜು)
ಸರ್ಕಾರದ ಅಧೀನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ವೈದ್ಯಕೀಯ ಶಿಕ್ಷಣ)

ಇವರಿಗೆ

೧) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತರು : ನಿರ್ದೇಶಕರು, ಬೆಂಗಳೂರು-560 009
೨) ವೈದ್ಯಕೀಯ ಶಿಕ್ಷಣ ನಿರ್ದೇಶಕರು, ಆನಂದರಾವ್ ವೃತ್ತ , ಬೆಂಗಳೂರು-560 009
೩) ಸರ್ಕಾರದ ಜಂಟಿ ಕಾರ್ಯದರ್ಶಿ,ಸಂಸದೀಯ ವ್ಯವಹಾರಗಳ ಇಲಾಖೆ(ಸಚಿವ ಸಂಪುಟ)(ಸಿ.ಸಂಖ್ಯೆ 231/2005)
೪) ವೈದ್ಯಕೀಯ ಶಿಕ್ಷಣ ಸಚಿವರ ಆಪ್ತಕಾರ್ಯದರ್ಶಿ
೫) ಅಧ್ಯಕ್ಷರು : ಸದಸ್ಯ ಕಾರ್ಯದರ್ಶಿ , ಪ್ಯಾರಾ ಮೆಡಿಕಲ್ ಬೋರ್ಡ್, ಬೆಂಗಳೂರು-560 002
೬) ಪ್ರಾಂಶುಪಾಲರು, ಶ್ರೀಮತಿ ಕಮಲಾತಾಯಿ ಹೆರಂಜಾಲ್ಸ್ ಪ್ಯಾರಾಮೆಡಿಕಲ್ ಕಾಲೇಜ್, ಬಾಗಲಕೋಟೆ-೫೮೭ ೧೦೧
೭) ಕಾರ್ಯದರ್ಶಿ, ಶ್ರೀಮತಿ ಕಮಲಾತಾಯಿ ಹೆರಂಜಾಲ್ಸ್ ರೀಸರ್ಚ್ ಸೆಂಟರ್ ಅಂಡ್ ಎಜುಕೇಷನಲ್ ಸೊಸೈಟಿ, ವಿದ್ಯಾ ಪ್ರಸಾರಕ ಮಂಡಲ್ ಬಿಲ್ಡಿಂಗ್, ಬಾಗಲಕೋಟೆ- ೫೮೭ ೧೦೧